# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| (1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1222 |
| (2) | ಮಾನ್ಯ ಸದಸ್ಯರ ಹೆಸರು | ಶ್ರೀ.ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| (3) | ಉತ್ತರಿಸಬೇಕಾದ ದಿನಾಂಕ | 29.12.2022 |
| (4) | ಉತ್ತರಿಸುವ ಸಚಿವರು | ಮಾನ್ಯ ಕಾನೂನು ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆಯ 7 ತಾಲ್ಲೂಕುಗಳಲ್ಲಿ ಮಂಜೂರಾಗಿರುವ ನ್ಯಾಯಾಲಯಗಳ ಸಂಖ್ಯೆ ಮತ್ತು ಹಾಲಿ ಕಾರ್ಯನಿರ್ವಹಿಸುತ್ತಿರುವ ನ್ಯಾಯಾಲಯಗಳ ಸಂಖ್ಯೆ ಎಷ್ಟು; | (see table below) ಪ್ರಸ್ತುತ ಮಂಡ್ಯ ಜಿಲ್ಲೆಯಲ್ಲಿ 52 ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ. |

| ಹುದ್ದೆ | ಮಂಜೂರಾದ ನ್ಯಾಯಾಲಗಳ ಸಂಖ್ಯೆ | ಕಾರ್ಯನಿರ್ವಹಿಸುತ್ತಿರುವ ನ್ಯಾಯಾಲಯಗಳ ಸಂಖ್ಯೆ |
|---|---|---|
| ಜಿಲ್ಲಾ ನ್ಯಾಯಾಧೀಶರು | 9 | 8 |
| ಹಿರಿಯ ಸಿವಿಲ್ ನ್ಯಾಯಾಧೀಶರು | 15 | 22 |
| ಸಿವಿಲ್ ನ್ಯಾಯಾಧೀಶರು | 28 | 22 |

ಪ್ರಸ್ತುತ ಮಂಡ್ಯ ಜಿಲ್ಲೆಯಲ್ಲಿ 52 ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಮಂಡ್ಯ ಜಿಲ್ಲೆಯ 7 ತಾಲ್ಲೂಕುಗಳಲ್ಲಿನ ನ್ಯಾಯಾಲಯಗಳ ಮೂಲಭೂತ ಸೌಕರ್ಯಕ್ಕೆ ಕಳೆದ 3 ವರ್ಷಗಳಲ್ಲಿ ನ್ಯಾಯಾಂಗ ಇಲಾಖೆಯಿಂದ ವೆಚ್ಚ ಮಾಡಿದ ಮೊತ್ತವೆಷ್ಟು; (ಸಂಪೂರ್ಣ ಅನುದಾನದ ವಿವರ ನೀಡುವುದು) | ಮಂಡ್ಯ ಜಿಲ್ಲೆಯ 7 ತಾಲ್ಲೂಕುಗಳಲ್ಲಿನ ನ್ಯಾಯಾಲಯಗಳ ಮೂಲಭೂತ ಸೌಕರ್ಯಕ್ಕೆ ಕಳೆದ 2 ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದ ವೆಚ್ಚ ಮಾಡಿದ ವಿವರಗಳು ಈ ಕೆಳಕಂಡಂತಿದೆ. |

| ಕ್ರ. ಸಂ | ತಾಲ್ಲೂಕು | 2019-20 | | 2020-21 | | 2021-22 | |
|---|---|---|---|---|---|---|---|
| | | ಅನುದಾನ | ವೆಚ್ಚ | ಅನುದಾನ | ವೆಚ್ಚ | ಅನುದಾನ | ವೆಚ್ಚ |
| 1 | ಮಂಡ್ಯ | 32.07 | 32.07 | - | - | - | - |
| 2 | ಮದ್ದೂರು | - | - | - | - | - | - |
| 3 | ಮಳವಳ್ಳಿ | - | - | - | - | - | - |
| 4 | ನಾಗಮಂಗಲ | - | - | 9.21 | 9.21 | 32.78 | 32.78 |

| | | | | | | | |
|---|---|---|---|---|---|---|---|
| 5 | ಕೆ.ಆರ್.ಪೇಟೆ | 109.04 | 68.37 | 149.17 | 149.17 | 246.41 | 240.35 |
| 6 | ಶ್ರೀರಂಗಪಟ್ಟಣ | - | - | - | - | - | - |
| 7 | ಪಾಂಡವಪುರ | - | - | - | - | - | - |
| | ಒಟ್ಟು | 141.11 | 100.44 | 158.38 | 158.38 | 279.19 | 273.13 |

| | | |
|---|---|---|
| ಇ) | ಮಂಡ್ಯ ಜಿಲ್ಲಾ ನ್ಯಾಯಾಲಯ ಸಂಕೀರ್ಣ ನಿರ್ಮಿಸಲು ಸರ್ಕಾರದ ವತಿಯಿಂದ ತೋಟಗಾರಿಕಾ ಇಲಾಖೆಯ 2 ಎಕರೆ 10 ಗುಂಟೆ ಜಮೀನು ಮಂಜೂರು ಮಾಡಿದ್ದು, ಸದರಿ ಜಮೀನಿನ ಹಸ್ತಾಂತರಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ? | ಮಂಡ್ಯ ಜಿಲ್ಲಾ ನ್ಯಾಯಾಲಯ ಸಂಕೀರ್ಣ ನಿರ್ಮಿಸಲು ತೋಟಗಾರಿಕಾ ಇಲಾಖೆಯು ದಿನಾಂಕ:11.04.2022ರ ಆದೇಶದಲ್ಲಿ 2 ಎಕರೆ 30 ಗುಂಟೆ ಅಳತೆಯ ಜಮೀನನ್ನು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳನ್ನು ಕಡ್ಡಾಯವಾಗಿ ಪಾಲಿಸುವ ಷರತ್ತಿಗೆ ಒಳಪಟ್ಟು ನ್ಯಾಯಾಂಗ ಇಲಾಖೆಗೆ ಹಸ್ತಾಂತರಿಸಿ ಆದೇಶಿಸಿದೆ:-<br>1. ನ್ಯಾಯಾಂಗ ಇಲಾಖೆಗೆ ಹಸ್ತಾಂತರಿಸುವ ಜಮೀನಿನ ಸರಿಸಮಾನವಾದ ಮೌಲ್ಯದ ಹಾಗೂ ತೋಟಗಾರಿಕೆ ಕಾರ್ಯ ಚಟುವಟಿಕೆಗಳಿಗೆ ಸೂಕ್ತವಾದ ಪರ್ಯಾಯ ಜಮೀನನ್ನು ಕಂದಾಯ ಇಲಾಖೆಯ ಮುಖಾಂತರ ಎರಡು ತಿಂಗಳೊಳಗಾಗಿ ತೋಟಗಾರಿಕೆ ಇಲಾಖೆಯ ವಶಕ್ಕೆ ಹಸ್ತಾಂತರಿಸುವುದು.<br>2. ಕಂದಾಯ ಇಲಾಖೆಯಿಂದ ಪರ್ಯಾಯ ಜಮೀನನ್ನು ಸಂಪೂರ್ಣ ಕಂದಾಯ ದಾಖಲಾತಿಗಳೊಂದಿಗೆ ತೋಟಗಾರಿಕೆ ಇಲಾಖೆಗೆ ಹಸ್ತಾಂತರಿಸಿದ ನಂತರವಷ್ಟೇ ಪ್ರಸ್ತಾಪಿತ ಜಮೀನನ್ನು ನ್ಯಾಯಾಂಗ ಇಲಾಖೆಗೆ ಹಸ್ತಾಂತರಿಸುವುದು.<br>3. ಸದರಿ ಜಮೀನಿನ ಹಸ್ತಾಂತರ ಪ್ರಕ್ರಿಯೆಯಿಂದ ತೋಟಗಾರಿಕೆ ಸಸ್ಯಕ್ಷೇತ್ರದ ಚಟುವಟಿಕೆಗಳಿಗೆ ಯಾವುದೇ ಧಕ್ಕೆ ಉಂಟಾಗದಿರುವುದನ್ನು ಖಚಿತಪಡಿಸಿಕೊಳ್ಳುವುದು.<br>4. ತೋಟಗಾರಿಕೆ ಸಸ್ಯಕ್ಷೇತ್ರಗಳಲ್ಲಿನ ಪ್ರಭೇದಗಳ ಅಭಿವೃದ್ಧಿ ಕಾರ್ಯವನ್ನು ಯಥಾಸ್ಥಿತಿ ಕಾಪಾಡಿಕೊಳ್ಳುವುದು.<br>5. ಹಸ್ತಾಂತರ ಪ್ರಕ್ರಿಯೆಯಿಂದ ಪಡೆಯುವ ಪರ್ಯಾಯ ಜಮೀನಿನ ಸಂಪೂರ್ಣವಾದ ಕಂದಾಯ ದಾಖಲಾತಿಯನ್ನು ಹಸ್ತಾಂತರಿಸುವ ಜಮೀನಿನಲ್ಲಿ ಹಾಲಿ ಇರುವ ರಂಗಮಂದಿರವನ್ನು ತೋಟಗಾರಿಕೆ ಇಲಾಖೆಗೆ ಒಳಪಡುವ ಬೇರೆ ಜಾಗದಲ್ಲಿ ನ್ಯಾಯಾಂಗ ಇಲಾಖೆ ವತಿಯಿಂದ "ನಾಲ್ವಡಿ ಕೃಷ್ಣರಾಜ ಒಡೆಯರ್" ಇವರ ಹೆಸರಿನಲ್ಲಿ ಮರು ನಿರ್ಮಾಣ ಮಾಡಿ ತೋಟಗಾರಿಕೆ ಇಲಾಖೆಗೆ ವಹಿಸುವುದು. |

| | | |
|---|---|---|
| | | 6. ತೋಟಗಾರಿಕೆ ಇಲಾಖೆಯಿಂದ ನ್ಯಾಯಾಂಗ ಇಲಾಖೆಗೆ ಹಸ್ತಾಂತರಿಸಲ್ಪಡುವ ಜಾಗದಲ್ಲಿ ಪ್ರಸ್ತುತ ಇರುವ ಯಾವುದೇ ಗಿಡ ಮರಗಳಿಗೆ ಹಾನಿಯಾಗದಂತೆ ಎಲ್ಲಾ ಗಿಡಮರಗಳನ್ನು (Tree transplantation) ಬೇರೆಡೆಗೆ ಬೇರು ಸಮೇತ ಸ್ಥಳಾಂತರಿಸುವುದು.<br><br>7. ಪ್ರತಿವರ್ಷ ತೋಟಗಾರಿಕೆ ಇಲಾಖೆಯಿಂದ ರೈತರಿಗಾಗಿ ಏರ್ಪಡಿಸಲಾಗುವ ಫಲಪುಷ್ಪ ಪ್ರದರ್ಶನವನ್ನು ತೋಟಗಾರಿಕೆ ಇಲಾಖೆಯ ಉಳಿದ/ಬದಲಿ ಜಾಗದಲ್ಲಿ ಮುಂದುವರೆಸಲು ನ್ಯಾಯಾಂಗ ಇಲಾಖೆಯು ಸಹಕಾರ ನೀಡುವುದು.<br><br>8. ರೈತರು ಮತ್ತು ತೋಟಗಾರಿಕೆ ಚಟುವಟಿಕೆಗಳಿಗೆ ಪೂರಕವಾಗಿ ಕ್ರಮ ಕೈಗೊಳ್ಳತಕ್ಕದ್ದು.<br><br>ಜಮೀನು/ಭೂಮಿ ಹಸ್ತಾಂತರ ವ್ಯವಹಾರವು ಸಂಪೂರ್ಣವಾಗಿ ಸರ್ಕಾರಿ ಇಲಾಖೆ ಮತ್ತು ನ್ಯಾಯಾಂಗ ಇಲಾಖೆಗಳ ನಡುವೆ ಇರುವುದರಿಂದ ಹಾಗೂ ವ್ಯಾಜ್ಯಗಾರರ ಹಿತಾಸಕ್ತಿಯಿಂದ ಮಂಡ್ಯದಲ್ಲಿ ನ್ಯಾಯಾಲಯದ ಕಟ್ಟಡಗಳ ನಿರ್ಮಾಣದ ಅವಶ್ಯಕತೆ ಇರುವುದರಿಂದ, ನ್ಯಾಯಾಂಗ ಇಲಾಖೆಗೆ ಮೇಲ್ಕಂಡ ಜಮೀನನ್ನು ಮಂಜೂರು ಮಾಡಿ ಹೊರಡಿಸಲಾದ ಆದೇಶದಲ್ಲಿ ವಿಧಿಸಿರುವ ಷರತ್ತುಗಳ ಬಗ್ಗೆ ಮರು ಮರುಪರಿಶೀಲಿಸಿ, ಸದರಿ ಷರತ್ತುಗಳನ್ನು ಸಡಿಲಿಸುವಂತೆ ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ ರವರು ದಿನಾಂಕ 31.5.2022 ಮತ್ತು 21.12.2022ರ ಪತ್ರದಲ್ಲಿ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ ಇವರನ್ನು ಕೋರಿರುತ್ತಾರೆ. ಪ್ರಸ್ತುತ ಪ್ರಸ್ತಾವನೆಯು ತೋಟಗಾರಿಕೆ ಇಲಾಖೆಯ ಪರಿಶೀಲನೆಯಲ್ಲಿದೆ. |

**ಸಂಖ್ಯೆ: ಲಾ-ಎಲ್‌ಸಿಇ/304/2022**

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ಮತ್ತು ಶಾಸನ
ರಚನೆ ಹಾಗೂ ಸಣ್ಣ ನೀರಾವರಿ ಸಚಿವರು